**ಕರ್ನಾಟಕ ಸರ್ಕಾರದ ನಡವಳಿಗಳು**

Dr.BJRLIDC LTD.
MD
CM (Admn.)
CM (Devn.)
CM (Compl.)
CM (Accts.)
Mngr (Tech.)

ವಿಷಯ: ಚಿತ್ರದುರ್ಗ ನಗರದಲ್ಲಿ ಡಾ॥ ಬಾಬು ಜಗಜೀವನ ರಾಂ ಆಡಿಟೋರಿಯಂ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರ ಏಕ ಕಡತ.

ಪ್ರಸ್ತಾವನೆ:-

ಮೇಲೆ ಓದಲಾದ ಏಕ ಕಡತದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಇವರು ಚಿತ್ರದುರ್ಗ ನಗರದ ಮಧ್ಯ ಭಾಗದಲ್ಲಿ ಅಂದರೆ ಬೆಂಗಳೂರು-ದಾವಣಗೆರೆ ಮುಖ್ಯ ರಸ್ತೆಯಲ್ಲಿರುವ ಹಳೆ ಜಿಲ್ಲಾ ಪಂಚಾಯತ್ ಅವರಣದಲ್ಲಿ (ಪ್ರವಾಸಿ ಮಂದಿರ ಪಕ್ಕ) ನಿಗಮದ ಹೆಸರಿಗೆ 17 ಗುಂಟೆ ಜಾಗವನ್ನು 30 ವರ್ಷ ಲೀಸ್ ಅವಧಿಗೆ ಜಿಲ್ಲಾಧಿಕಾರಿಗಳು, ಚಿತ್ರದುರ್ಗರವರು ಮಂಜೂರು ಮಾಡಿದ್ದು, ರೂ.1,71,110/- ಗಳ ಭೂ ಮೌಲ್ಯ ಮತ್ತು ಭೂ ಪರಿವರ್ತನ ಶುಲ್ಕವನ್ನು ಪಾವತಿಸಿ ನಿಗಮದ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದು, ಈ ಜಾಗ ಮುಖ್ಯ ರಸ್ತೆಗೆ ಹೊಂದಿಕೊಂಡಂತಿರುತ್ತದೆ. ಸದರಿ ಜಾಗದ ಹಿಂಭಾಗದಲ್ಲಿ ಒಂದು ಆಡಿಟೋರಿಯಂ ನಿರ್ಮಿಸಿ ನಿಗಮದ ಮೇಲೆ ಅವಲಂಭಿತವಾಗಿರುವ ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಸಮುದಾಯದವರ ಸಾಂಸ್ಕೃತಿಕ ಮತ್ತು ಇತರ ಚಟುವಟಿಕೆಗಳನ್ನು ನಡೆಸಲು ಅವಕಾಶ ಕಲ್ಪಿಸುವ ಸಲುವಾಗಿ/ಶ್ರೇಯೋಭಿವೃದ್ಧಿಗಾಗಿ ಬಳಸಲು ಉದ್ದೇಶಿಸಿರುವುದಾಗಿ ತಿಳಿಸಿರುತ್ತಾರೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಸುಮಾರು 10 ಲಕ್ಷ ಸಂಖ್ಯೆಯ ಪರಿಶಿಷ್ಟ ಜಾತಿ ಸಮುದಾಯದವರಿದ್ದು, ಇವರಲ್ಲಿ ಸಾವಿರಾರು ಜನ ಚರ್ಮೋದ್ಯೋಗದ ಮೇಲೆ ಅವಲಂಬಿತರಾಗಿರುತ್ತಾರೆ. ಹಾಗೂ ಬಹುತೇಕ ಕುಶಲಕರ್ಮಿಗಳು ಅವರ ಜೀವನೋಪಾಯಕ್ಕಾಗಿ ರಸ್ತೆಬದಿ ಕುಳಿತು ದುರಸ್ತಿ ಹಾಗೂ ಉತ್ಪಾದನ ಕಾರ್ಯಗಳಲ್ಲಿ ತೊಡಗಿರುತ್ತಾರೆ. ತಲಾತಲಂತರದಿಂದ ಶೋಷಣೆಗೆ ಒಳಗಾದ ಈ ಸಮುದಾಯದವರಿಗೆ ಸಾಂಸ್ಕೃತಿಕ ಚಟುವಟಿಕೆಗಳು, ಸಭೆಗಳು, ಮದುವೆ ಸಮಾರಂಭಗಳು ಮತ್ತಿತರೆ ಚಟುವಟಿಕೆಗಳನ್ನು ನಡೆಸಲು ಸರಿಯಾದ ಸ್ಥಳಗಳು ದೊರೆಯುವುದು ದುರ್ಲಭವಾಗಿರುತ್ತದೆ. ಅಲ್ಲದೆ ಹೆಚ್ಚಿನ ಬಾಡಿಗೆ ಪಾವತಿಸಿ ಸಮಾರಂಭ/ಸಭೆಗಳಿಗೆ ಸೂಕ್ತ ಸ್ಥಳಾವಕಾಶ ಪಡೆಯಲು ಈ ಸಮುದಾಯದವರು ಶಕ್ತರಾಗಿರುವುದಿಲ್ಲ. ಇದರಿಂದ ಸಮುದಾಯದವರು/ ಕುಶಲಕರ್ಮಿಗಳು ಮತ್ತಷ್ಟು ತೊಂದರೆಗೊಳಗಾಗುವುದಲ್ಲದೆ ಶೋಷಣೆಗೊಳಪಡುತ್ತಾರೆ. ಆದುದರಿಂದ ಅವರುಗಳಿಗೆ ಗೌರವಯುತವಾದ ಜೀವನ ಸಾಗಿಸಲು ವ್ಯವಸ್ಥೆ ಕಲ್ಪಿಸುವುದು ನಿಗಮದ ಕರ್ತವ್ಯವಾಗಿರುತ್ತದೆ. ಅಲ್ಲದೆ ನಗರದ ಮಧ್ಯಭಾಗದಲ್ಲಿ ಡಾ॥ ಬಾಬು ಜಗಜೀವನ ರಾಂ ರವರ ಹೆಸರಿನಲ್ಲಿ ಒಂದು ಆಡಿಟೋರಿಯಂ ನಿರ್ಮಿಸುವುದು ನಿಗಮದ ಉದ್ದೇಶವಾಗಿರುವುದಾಗಿ ತಿಳಿಸಿರುತ್ತಾರೆ.

ಆದ್ದರಿಂದ, ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ಚಿತ್ರದುರ್ಗ ನಗರದಲ್ಲಿ ಪ್ರಮುಖ ಸ್ಥಳದಲ್ಲಿ ಜಿಲ್ಲಾಧಿಕಾರಿಗಳಿಂದ ಜಾಗದ ಮಂಜೂರಾತಿ ಪಡೆದಿರುವುದರಿಂದ ಸದರಿ ಜಾಗದ ಹಿಂಭಾಗದಲ್ಲಿ ಎರಡು ಮಹಡಿಗಳನ್ನು ಒಳಗೊಂಡಂತೆ **"ಡಾ॥ ಬಾಬು ಜಗಜೀವನ ರಾಂ ಆಡಿಟೋರಿಯಂ"** ನಿರ್ಮಿಸಲು ಉದ್ದೇಶಿಸಿದ್ದು, ನಿಗಮದ ಸಿವಿಲ್

--------2

3208
4/10/17

ವರ್ಕ್ಸ್ ಕನ್‌ಸಲ್‌ಟೆಂಟ್‌ರವರಾದ ಮೆ॥ ವ್ಯಾಪ್‌ಕಾಸ್ ಸಂಸ್ಥೆ, ಬೆಂಗಳೂರುರವರಿಂದ ನೀಲಿ ನಕ್ಷೆ ಮತ್ತು ಅಂದಾಜು ಪಟ್ಟಿ ಸಲ್ಲಿಸಿರುತ್ತಾರೆ. ಈ ಯೋಜನಾ ವೆಚ್ಚ ರೂ. 6,03,50,000/- (ರೂ. ಆರು ಕೋಟಿ ಮೂರು ಲಕ್ಷ ಐವತ್ತು ಸಾವಿರಗಳು ಮಾತ್ರ) ಆಗುತ್ತದೆಂದು ಅಂದಾಜಿಸಲಾಗಿದೆ.

ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಕ್ರಿಯಾ ಯೋಜನೆಯಲ್ಲಿ ಮೈಸೂರಿನ ಸಾತಗಳ್ಳಿಯಲ್ಲಿ ಲೆದರ್ ಕಾಂಪ್ಲೆಕ್ಸ್ ನಿರ್ಮಾಣ ಯೋಜನೆಗೆ ಕಾಯ್ದಿರಿಸಿರುವ ರೂ.12.80 ಕೋಟಿ ಅನುದಾನವನ್ನು ಹಲವು ಅಡಚಣೆಗಳಿರುವುದರಿಂದ ಮತ್ತು ಉದ್ದೇಶಿತ ಕಾಮಗಾರಿಗಳ ಬದಲಾಗಿ ವಸತಿ ಕಾರ್ಯಾಗಾರಗಳು ಮತ್ತು ಉತ್ಪಾದನ ಕೇಂದ್ರ ಸ್ಥಾಪಿಸಲು ಕುಶಲಕರ್ಮಿಗಳ ಮುಖಂಡರುಗಳು ಬೇಡಿಕೆ ಇಟ್ಟಿರುವ ಹಿನ್ನೆಲೆಯಲ್ಲಿ ಅನುದಾನವನ್ನು ಖರ್ಚು ಮಾಡಿ ಪ್ರಗತಿ ಸಾಧಿಸುವುದು ವಿಳಂಬವಾಗುವುದರಿಂದ ಈ ಯೋಜನೆಗೆ ಕಾಯ್ದಿರಿಸಿದ ಅನುದಾನವನ್ನು ಚಿತ್ರದುರ್ಗ ನಗರದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿರುವ ಕಾಮಗಾರಿಗಳಿಗೆ ಬಳಸಿಕೊಳ್ಳಲು ದಿನಾಂಕ: 31.08.2017 ರಂದು ನಡೆದ ನಿಗಮದ 202ನೇ ಮಂಡಳ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದೆ ಎಂದು ತಿಳಿಸಿರುತ್ತಾರೆ.

ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಆರ್ಥಿಕ ಅಧಿಕಾರದ ಪಟ್ಟಿಯ ಪ್ರಕಾರ (Deligation of Powers) ನಿಗಮದ ಮಂಡಳಿಗೆ ರೂ.500.00 ಲಕ್ಷಗಳವರೆಗೆ ಮಾತ್ರ ಹೊಸ ಪ್ರಾಜೆಕ್ಟ್ಸ್ ಅಥವಾ ಯೋಜನೆಗಳಿಗೆ ಅನುಮೋದನೆ ನೀಡಲು ಅಧಿಕಾರವಿರುತ್ತದೆ. ಸದರಿ ಪ್ರಾಜೆಕ್ಟ್‌ನ ಅಂದಾಜು ವೆಚ್ಚ ರೂ.500.00 ಲಕ್ಷಗಳು ಮೀರುವುದರಿಂದ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುವುದಾಗಿ ತಿಳಿಸಿರುತ್ತಾರೆ.

ಮೇಲೆ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವು ಚಿತ್ರದುರ್ಗ ನಗರದಲ್ಲಿ ಡಾ॥ ಬಾಬು ಜಗಜೀವನರಾಂ ಆಡಿಟೋರಿಯಂ ನಿರ್ಮಾಣ ಮಾಡುವ ಕುರಿತು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ

***ಸರ್ಕಾರಿ ಆದೇಶ ಸಂಖ್ಯೆ: ಸಕಇ 325 ಎಸ್‌ಎಲ್‌ಪಿ 2017, ಬೆಂಗಳೂರು, ದಿನಾಂಕ: 03-10-2017***

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿತ್ರದುರ್ಗ ನಗರದ ಮಧ್ಯ ಭಾಗದಲ್ಲಿ ಡಾ॥ ಬಾಬು ಜಗಜೀವನ ರಾಂ ನಿಗಮವು ಹೊಂದಿರುವ 17 ಗುಂಟೆ ಜಾಗದ ಹಿಂಭಾಗದಲ್ಲಿ ರೂ.6,03,50,000/- (ರೂ.ಆರು ಕೋಟಿ ಮೂರು ಲಕ್ಷ ಐವತ್ತು ಸಾವಿರಗಳು ಮಾತ್ರ) ವೆಚ್ಚದಲ್ಲಿ ಡಾ॥ ಬಾಬು ಜಗಜೀವನ ರಾಂ ಆಡಿಟೋರಿಯಂ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿ, ಸದರಿ ಕಾಮಗಾರಿಯನ್ನು ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಕೈಗೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2017, ದಿನಾಂಕ: 05-04-2017 ರನ್ವಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

3/10/17

(ಪಿ.ಎನ್. ನಾಗರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ-1 (ಪ್ರ),
ಸಮಾಜ ಕಲ್ಯಾಣ ಇಲಾಖೆ.

ಗೆ:-

1) ಮಹಾಲೇಖಪಾಲರು, (ಎ&ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು
2) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

3) ವ್ಯವಸ್ಥಾಪಕ ನಿರ್ದೇಶಕರು, ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
4) ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ
5) ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಚಿತ್ರದುರ್ಗ
6) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ:-

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
2) ಸರ್ಕಾರದ ಉಪ ಕಾರ್ಯದರ್ಶಿ-1 ರವರ ಆಪ್ತ ಸಹಾಯಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು

* * * * *